# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

### ಮಾನಸಗಂಗೋತ್ರಿ, ಮೈಸೂರು – 570 006

ದೂರವಾಣಿ :0821-2419318/386/429 e-mail : dswuommgm@gmail.com


ಸಂಖ್ಯೆ: ವಿಕ್ಷೇಪಾ.2/345/2017-18 ದಿನಾಂಕ: 24-07-2024

**ಹರಾಜು ಪ್ರಕಟಣೆ**

ವಿಷಯ: ವಿ.ವಿ. ವಿದ್ಯಾರ್ಥಿನಿಲಯಗಳ ಭೋಜನಾಲಯದ ಆಹಾರ ತ್ಯಾಜ್ಯವನ್ನು ವಿಲೇವಾರಿ ಮಾಡಲು ಒಂದು ವರ್ಷದ ಅವಧಿಗೆ ಹರಾಜು ಮೂಲಕ ಗುತ್ತಿಗೆ ನೀಡುವ ಬಗ್ಗೆ.

*****

ಮೈಸೂರು ನಗರ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾನಿಲಯದ ಈ ಕೆಳಕಂಡ ವಿದ್ಯಾರ್ಥಿನಿಲಯಗಳ ಭೋಜನಾಲಯದ ಆಹಾರ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಹರಾಜು ಪ್ರಕಟಣೆಯಲ್ಲಿ ನಮೂದಿಸಿರುವ ನಿಬಂಧನೆಗೊಳಪಟ್ಟಂತೆ ಒಂದು ವರ್ಷದ ಅವಧಿಗೆ ದಿನಾಂಕ 08-08-2024 ರಂದು ಬೆಳಗ್ಗೆ 11:00 ಗಂಟೆಗೆ ಈ ನಿರ್ದೇಶನಾಲಯದಲ್ಲಿ ಹರಾಜು ಮೂಲಕ ಗುತ್ತಿಗೆಯನ್ನು ನೀಡಲು ಪ್ರಕಟಿಸಲಾಗಿದೆ.

1. ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -1, ಮಾನಸಗಂಗೋತ್ರಿ, ಮೈಸೂರು
2. ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -2, ಮಾನಸಗಂಗೋತ್ರಿ, ಮೈಸೂರು
3. ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -3, ಮಾನಸಗಂಗೋತ್ರಿ, ಮೈಸೂರು
4. ಸ್ನಾತಕೋತ್ತ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್ -1, ಮಾನಸಗಂಗೋತ್ರಿ, ಮೈಸೂರು
5. ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್ -2, ಮಾನಸಗಂಗೋತ್ರಿ, ಮೈಸೂರು
6. ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್ -3, ಮಾನಸಗಂಗೋತ್ರಿ, ಮೈಸೂರು
7. ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ. ಮಾನಸಗಂಗೋತ್ರಿ, ಮೈಸೂರು
8. ಯು.ಜಿ. ವಿದ್ಯಾರ್ಥಿಗ್ರಾಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು
9. ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯ -2, ಸರಸ್ವತಿಪುರಂ, ಮೈಸೂರು
10. ಗೌತಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು
11. ಮಹಾರಾಜ/ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯ, ಸರಸ್ವತಿಪುರಂ, ಮೈಸೂರು
12. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿದ್ಯಾರ್ಥಿನಿಲಯ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು
13. ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು
14. ಯುವರಾಜ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು

<u>ನಿಭಂಧನೆಗಳು:-</u>

1. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಭೋಜನಾಲಯದ ಡಸ್ಟ್‌ಬಿನ್‌ನಲ್ಲಿನ ಅನುಪಯುಕ್ತ ಆಹಾರ ತ್ಯಾಜ್ಯವನ್ನು ವಿಲೇವಾರಿ ಮಾಡುವ ಗುತ್ತಿಗೆಯ ಅವಧಿಯು ಹರಾಜು ಪಡೆಯಲಾಗುವ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಇರುತ್ತದೆ.

2. ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬರು (ಇ.ಎಂ.ಡಿ) ಮೊತ್ತ ರೂ. 3,000/- (ಮೂರು ಸಾವಿರ ರೂಪಾಯಿಗಳು ಮಾತ್ರ) ಮುಂಗಡ ಠೇವಣಿ ಪಾವತಿಸಬೇಕು. ಹರಾಜಿನಲ್ಲಿ ಯಶಸ್ವಿ ಬಿಡ್‌ದಾರರ

Scanned with OKEN Scanner

ಮೊತ್ತವನ್ನು ಹೊರತುಪಡಿಸಿ ಉಳಿದವರಿಗೆ ಸ್ಥಳದಲ್ಲೇ ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲಾಗುವುದು.

3. ಯಶಸ್ವಿ ಬಿಡ್‌ದಾರರು ಬಿಡ್‌ನ ಶೇ.50ರಷ್ಟು ಮೊತ್ತವನ್ನು ಗುತ್ತಿಗೆ ಪಡೆದ ದಿನದಂದೇ ಮತ್ತು ಬಿಡ್‌ನ ಬಾಕಿ ಮೊತ್ತವನ್ನು ಗುತ್ತಿಗೆ ಪಡೆದ ಒಂದು ವಾರದೊಳಗೆ ಜಿ.ಆರ್.ಎ. ಖಾತೆಗೆ ಪಾವತಿಸಬೇಕಿರುತ್ತದೆ. ಇಲ್ಲವಾದಲ್ಲಿ, ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

4. ಗುತ್ತಿಗೆ ಪಡೆದ ವ್ಯಕ್ತಿಗಳು ಪ್ರತಿದಿನ ಆಯಾಯ ವಿದ್ಯಾರ್ಥಿನಿಲಯಗಳಲ್ಲಿ ಆಹಾರ ತ್ಯಾಜ್ಯಗಳನ್ನು ತೆಗೆದುಕೊಂಡು ಹೋಗಲು ಪೂರ್ಣ ಜವಾಬ್ದಾರರಾಗಿರುತ್ತಾರೆ. ಒಂದು ವೇಳೆ ಆಹಾರ ತ್ಯಾಜ್ಯಗಳನ್ನು ತೆಗೆದುಕೊಂಡು ಹೋಗಿಲ್ಲವೆಂದು ಆಯಾ ನಿಲಯಗಳ ವತಿಯಿಂದ ದೂರು ಬಂದಲ್ಲಿ ಸದರಿಯವರು ಪಾವತಿಸಿರುವ ಮೊತ್ತವನ್ನು ಹಿಂದಿರುಗಿಸದೇ ಗುತ್ತಿಗೆಯನ್ನು ತಕ್ಷಣ ರದ್ದು ಪಡಿಸಲಾಗುವುದು.

5. ಆಹಾರ ತ್ಯಾಜ್ಯವನ್ನು ತೆಗೆದುಕೊಂಡು ಹೋಗುವ ಗುತ್ತಿಗೆದಾರರು ವಿದ್ಯಾರ್ಥಿನಿಲಯಗಳಲ್ಲಿ ಇರುವ ಆಹಾರ ತ್ಯಾಜ್ಯಗಳ ದಿನನಿತ್ಯ ವಿಲೇವಾರಿ ನಂತರ ಡಸ್ಟ್‌ಬಿನ್‌ಗಳನ್ನು ಸ್ವಚ್ಛಗೊಳಿಸಿ ನಿಗಧಿತ ಸ್ಥಳಗಳಲ್ಲಿ ಇಡಲು ಬದ್ಧರಾಗಿರಬೇಕು.

6. ಆಹಾರ ತ್ಯಾಜ್ಯವನ್ನು ತೆಗೆದುಕೊಂಡು ಹೋಗಲು ಗುತ್ತಿಗೆ ಪಡೆದ ವ್ಯಕ್ತಿಯು ಒಟ್ಟು ಟೆಂಡರ್ ಪಡೆದಿರುವ ಮೊತ್ತಕ್ಕೆ ಶೇ. 3%ರಷ್ಟು ಆದಾಯ ತೆರಿಗೆಯನ್ನು ಪಾವತಿಸುವುದು ಕಡ್ಡಾಯ. (ಪ್ಯಾನ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ನೀಡುವುದು)

7. ಟೆಂಡರ್ ಪಡೆಯುವವರು ಈ ಮೇಲಿನ ನಿಬಂಧನೆಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ನಿಯಮಗಳಿಗೆ ಬದ್ಧರಾಗಿರಬೇಕು.

8. ಆಹಾರ ತ್ಯಾಜ್ಯವನ್ನು ತೆಗೆದುಕೊಂಡು ಹೋಗುವ ಹರಾಜು ಪ್ರಕ್ರಿಯೆಗೆ ಸಂಬಂದಿಸಿದಂತೆ ಆದೇಶ ನೀಡುವುದು ಮತ್ತು ರದ್ದುಪಡಿಸುವ ಅಧಿಕಾರವನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರು ಹೊಂದಿರುತ್ತಾರೆ.

(I/c) 24/07/24

ನಿರ್ದೇಶಕ

DIRECTOR OF STUDENT WELFARE
UNIVERSITY OF MYSORE, MYSURU

ಗೆ,

1. ಸಾರ್ವಜನಿಕರ ಪ್ರಕಟಣೆಗಾಗಿ.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
4. ನಿರ್ದೇಶಕರು ಐ.ಸಿ.ಡಿ ವಿಭಾಗ ಮಾನಸ ಗಂಗೋತ್ರಿ ಮೈಸೂರು, -ವಿಶ್ವವಿದ್ಯಾನಿಲಯದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು
5. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಕಚೇರಿ ಪ್ರತಿ/ರಕ್ಷಾ ಕಡತಕ್ಕೆ

Scanned with OKEN Scanner